IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಶಿವಶರಣೆ ಅಕ್ಕಮಹಾದೇವಿ ಆಧ್ಯಾತ್ಮಿಕ ಚಿಂತನೆ

**ಡಾ. ಪ್ರಕಾಶ ಎನ್ ನರಗುಂದ**
**ಕನ್ನಡ ಉಪನ್ಯಾಸಕರು**
**ಎಮ್.ಜಿ.ವ್ಹಿ.ಸಿ ಕಲಾ, ವಾಣಿಜ್ಯ ಹಾಗೂ**
**ವಿಜ್ಞಾನ ಪದವಿ ಮಹಾವಿದ್ಯಾಲಯ,**
**ಮುದ್ದೇಬಿಹಾಳ**

ಹನ್ನೇರಡನೆ ಶತಮಾನದ ಶಿವಶರಣರಲ್ಲಿ ಮಹಿಳಾ ವಚನಕಾರ್ತಿಯಾಗಿ ಸಮಾಜದ ಅಂಕು ಡೊಂಕುಗಳನ್ನು ತಿದ್ದಿದ ಶಿವಶರಣೆ ಅಕ್ಕಮಹಾದೇವಿ. ಪ್ರಥಮಾದಿ ಶರಣರಾದ ಬಸವಣ್ಣ ಸಿದ್ಧರಾಮರ ವಚನಗಳಿಗಿಂತ ಅಜಗಣ್ಣನ ವಚನಗಳು ಶ್ರೇಷ್ಠ ಅಜಗಣ್ಣನ ಆರು ವಚನಗಳಿಗೆ ಅಕ್ಕಮಹಾದೇವಿಯ ಒಂದು ವಚನಕ್ಕೆ ಸಮನಾಗಿವೆ. ಅಂದಿನ ಸಮಾಜದಲ್ಲಿರುವ ಮೌಢ್ಯ, ಜಾತಿಯತೆ ಹಾಗೂ ಕಂದಾಚಾರಗಳನ್ನು ತಮ್ಮ ವಚನಗಳ ಮುಖಾಂತರ ತಿಳಿಸಿ ಜನರಲ್ಲಿ ಜಾಗೃತಿ ಮೂಡಿಸಿದವರು.

ಬಸವಣ್ಣ ಅವರ ಅನುಭವ ಮಂಟಪದ ಅವಿಭಾಜ್ಯ ಅಂಶವಾಗಿದ್ದ ಶಿವಶರಣೆ ಅಕ್ಕಮಹಾದೇವಿ ಶಿಕಾರಿಪುರ ತಾಲ್ಲೂಕ್ಕಿನ ಶಿರಾಳಕೊಪ್ಪ ಸಮೀಪದ ಉಡುತಡಿಯಲ್ಲಿ ಜನ್ಮ ತಾಳಿದಳು. ನಿರ್ಮಶೆಟ್ಟಿ ಹಾಗೂ ಸುಮತಿ ದಂಪತಿಗಳ ಉದರದಲ್ಲಿ ಜನಿಸಿದವಳು. ಹರಿಹರ ಕವಿ ಇವರನ್ನು ಓಂಕಾರಶೆಟ್ಟಿ ಮತ್ತು ಲಿಂಗಮ್ಮ ಎಂದು ಕರೆದಿರುವ ದಾಖಲೆಗಳಿವೆ. ಮಲ್ಲಿಕಾರ್ಜುನ ಎಂಬ ಅಂಕಿತನಾಮದಿಂದ ವಚನಗಳನ್ನು ಬರೆಯುವುದರ ಮೂಲಕ ಕನ್ನಡ ಸಾಹಿತ್ಯ ಮೊದಲ ಬಂಡಾಯ ಕವಿಯತ್ರಿ ಮತ್ತು ವಚನಗಾರ್ತಿಯರಾಗಿ ಸಾಮಾಜಿಕ ಬದಲಾವಣೆಗೆ ಶ್ರಮಿಸಿದವಳು. ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಲೇ ಉನ್ನ ಭವಂ ನಾಸ್ತಿಯಾಯಿತ್ತು! ಎಂದು ಒಂದು ವಚನ ತಿಳಿಸುತ್ತಾ 'ಗುರುಲಿಂಗದೇವ' ಎಂಬುದು ಅವಳ ಗುರುವಿನ ಹೆಸರು ಇರಬಹುದು. ಮಹಾದೇವಿ ಮಲ್ಲಿಕಾರ್ಜುನನ ವರದಿಂದಲೇ ಹುಟ್ಟಿದವಳಂತೆ ಉಡುತಡಿಯಲ್ಲಿ ಮಲ್ಲಿಕಾರ್ಜುನನ ದೇವಾಲಯವೊಂದು ಇದೆಯಂದು ಡಾ.ಫ.ಗು ಹಳಕಟ್ಟಿಯವರು ತಮ್ಮ ವಚನ ಸಂಪುಟದಲ್ಲಿ ತಿಳಿಸಿದ್ದಾರೆ. ಆ ದೇವಾಲಯಕ್ಕೆ ತಮ್ಮ ತಂದೆ–ತಾಯಿ ಗೆಳೆತಿಯರೊಡನೆ ಆಗಾಗ ಹೊದಾಗ ಅವಳಿಗೆ ತಿಳಿಯದಂತೆ ಅವಳ ಹೃದಯದಲ್ಲಿ ಮಲ್ಲಿಕಾರ್ಜುನನ ಮೋಹ ಮೊಳತಿರಬೇಕು.

ಅಕ್ಕಮಹಾದೇವಿಯ ಬರಹಗಳು (ವಚನಗಳು) ಮಾನವ ಜೀವನದ ನೀರ್ಣಾಯಕ ಘಟನೆಗಳಾಗಿ ನಮಗೆ ಮಾರ್ಗದರ್ಶನ ನೀಡುತ್ತವೆ. ಅಧಿಕಾರ, ಸಂಪತ್ತು, ವೈಭವ ಭೋಗ ಜೀವನಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿ ಜನಸಾಮಾನ್ಯರಂತೆ ಬದುಕಿ ಮಾದರಿಯಾದಳು. ತನ್ನ ಹಲವಾರು ವಚನಗಳಲ್ಲಿ ಮಾನವೀಯ ಮಿಡಿತಗಳನ್ನು ಆಧ್ಯಾತ್ಮಿಕ ವಿಚಾರ ಉಣಬಡಿಸಿದವಳು. ಅಕ್ಕಮಹಾದೇವಿಯು ತನ್ನ ಅಂತರಂಗದಲ್ಲಿ 'ಚನ್ನಮಲ್ಲಿಕಾರ್ಜುನ'ನ್ನೆ ಆರಾಧಿಸಿದಳು. ತನ್ನ ಗೆಳೆತಿಯರಿಗೆ ಮಲ್ಲಿಕಾರ್ಜುನನೇ ನನ್ನ ಪತಿ ಎಂದು ತಿಳಿಸಿದಳು. ಆಗ ಅವಳ ಆಪ್ತ ಗೆಳೆತಿಯೊಬ್ಬಳು 'ಎಂಥ ಸುಂದರನಿವನು ಸಖಿ! ಎಲ್ಲಿ ಕಂಡೆ ಇವನನ್ನು? ಎಂದು ಪ್ರಶ್ನಿಸಿದಾಗ

**‘ಅಕ್ಕ ಕೇಳವ್ವ ನಾನೊಂದು ಕನಸು ಕಂಡೆ ಅಕ್ಕಿಯಡಕೆ ತೆಂಗಿನಕಾಯ ಕಂಡೆ**
**ಚಿಕ್ಕ-ಚಿಕ್ಕ ಜಡೆಗಳ ಸುಲಿಪಲ್ಲಗೊರವನು ಭಿಕ್ಷಕ್ಕೆ ಬಂದುದು**
**ಕಂಡೆನವ್ವ’**
**ಮಿಕ್ಕಿ ಮೀರಿ ಹೋಹನ ಬೆಂಬತ್ತಿ ಕೈ ವಿಡಿದೆನು! ಚೆನ್ನಮಲ್ಲಿಕಾರ್ಜುನನ ಕಂಡು**
**ಕಣ್ದೆರೆದೆನು**

ಕನಸಿನಲ್ಲಿ ಕಂಡ ದೇವರು ಮಲ್ಲಿಕಾರ್ಜುನನ್ನ ತನ್ನ ಪತಿಯಂದು ನಂಬಿದ ಮಹಿಳೆ. ಇಂಥವಳನ್ನು ಸಮಾಜದಲ್ಲಿದ್ದ ಜನರು ಅಪಹಾಸ್ಯ ಮಾಡಲು ಪ್ರಾರಂಭಿಸಿದರು. ಅದಕ್ಕೆ ಅಕ್ಕನ ನುಡಿ ‘ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತೆಯಾ? ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದಂಡೆತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಂಡೆತಯ್ಯಾ? ಚೆನ್ನಮಲ್ಲಿಕಾರ್ಜುನ ಕೇಳಯ್ಯಾ. ಲೋಕದೊಳಗೆ ಹುಟ್ಟದ ಬಳಿಕ ಸುತ್ತಿನಿಂದೆಗಳು ಬಂದೆಡೆ ಮನದಲ್ಲಿ ಕೋಪವ ತಾಳದ ಸಮಾಧಾನಿಯಾಗಿರಬೇಕು ಪ್ರಸ್ತುತ ಪಡೆಸಿದ್ದಾಳೆ.

ಒಂದು ಸಾರಿ ಕೌಶಿಕ ಮಹಾರಾಜ ತನ್ನ ಊರನ್ನು ಸುತ್ತುತ್ತಿರುವಾಗ ಮಹಾದೇವಿಯನ್ನು ಕಾಣುತ್ತಾನೆ. ಅವಳ ರೂಪವನ್ನು ನೋಡಿ ಸೌಂದರ್ಯಕ್ಕೆ ಮನಸೋತನು. ಬಿರುಗಾಳಿಗೆ ಸಿಕ್ಕ ಹಡಗದಂತೆ ಹೊಯ್ದಾಡಿದನು. ತನ್ನ ಪರಿಚಾರಕರನ್ನು ಕಳುಹಿಸಿ ಒಪ್ಪಗೆ ಸೂಚಿಸಲು ಕೇಳಿದಾಗ ಅದಕ್ಕೆ ದಂಪತಿಗಳು ನಿರಾಕರಿಸಿದರು. ನಂತರ ಕೌಶಿಕ ಮಹಾರಾಜ ಅವರಿಗೆ ಹಿಂಸೆಯನ್ನು ಕೊಡಲು ಆಜ್ಞೆ ಮಾಡಿದನು. ನಂತರ ಮಹಾದೇವಿಯ ತಂದೆ-ತಾಯಿಗಳು ಮಗಳ ಮನವರಿಸಲು ಮುಂದಾದರು. ಅಕ್ಕಮಹಾದೇವಿಯು ಇದನ್ನರಿತು ಹೆಳುತ್ತಾಳೆ,

**ಒಳಗಣ ಗಂಡನಯ್ಯಾ**
**ಹೊರಗಣ ಮಿಂಡನಯ್ಯಾ, ಎರಡನ್ನು ನಡೆಸಲು**
**ಬಾರದಯ್ಯಾ. ಲೌಕಿಕ ಪಾರಮಾರ್ಥವೆಂಬರಡನೂ**
**ನಡೆಸಲೂ ಬಾರದಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ**

ಎಂದು ವಿನಯದಿಂದ ಉತ್ತರಿಸುತ್ತಾಳೆ. ಕೊನೆಗೆ ಕೌಶಿಕ ಮಹಾರಾಜ ದಂಪತಿಗಳನ್ನು ಅಪಹರಿಸಲು ಆಜ್ಞೆಮಾಡುತ್ತಾನೆ. ಬಲವಂತವಾಗಿ ಮದುವೆಗೆ ಒಪ್ಪಿ ಪಲ್ಲಕ್ಕಿ ಏರಿ ಅರಮನೆಗೆ ಹೋಗುತ್ತಾಳೆ. ಕೆಲವು ಷರತ್ತುಗಳನ್ನು ರಾಜನಿಗೆ ತಿಳಿಸುತ್ತಾಳೆ. ಆದರೆ ಕೌಶಿಕ ಮಹಾರಾಜ ಕಾಮದ ತೆವಲಿಗೆ ಸಿಕ್ಕು ಬಲತ್ಕರಿಸಲು ಮುಂದಾದಾಗ, ‘ಈ ಸಾಯಿಸುವ ಕೆಡುಸುವ ಗಂಡರನೊಯಿದು ಒಲೆಯೊಳಗಿಕ್ಕು’ ಎಂದು ಹೇಳಿ ತನ್ನ ಶರೀರದ ಮೇಲಿರುವ ಉಡುಪು-ಒಡುವೆಗಳನ್ನು ಕೌಶಿಕನಿಗೆ ನೀಡುವಳು ಅವಳ ಶರಿರವನ್ನು ಕಣ್ಣಾರೇ ಕಂಡ ಕಾಮುಕ ಕೌಶಿಕನ ಅಂತರ್ಕಣ್ಣು ತೆಗೆಸುತ್ತಾಳೆ. ತನ್ನ ಯವ್ವನದ ವಯಸ್ಸಿನಲ್ಲಿಯೇ ವೈರಾಗ್ಯ ಆವರಿಸಿಕೊಳ್ಳುತ್ತಾಳೆ. ದಿಗಂಬರವೇ ದಿವ್ಯಾಂಬರವಾಗಿ ಕೇಶರಾಶಿಯೇ ವೇಷಭೂಷಣವಾಗಿ, ರುದ್ರಾಕ್ಷಿಯೇ ಮೈದೊಡಿಗೆಯಾಗಿ ವಿಭೋತಿಯೇ ಒಳಗುಂದದರಿಶಿನವಾಗಿಸಿಗೊಂಡು ತನ್ನ ಹಸಿವು, ತೃಷೆ ಮುಂತಾದವುಗಳನ್ನು ನಿಯಂತ್ರಣ ಮಾಡಲು ಪ್ರಯತ್ನಿಸುವಳು.

‘ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೇ? ಲೌಕಿಕಕ್ಕೊಬ್ಬ ಗಂಡನೇ ಪಾರಮಾರ್ಥಕ್ಕೊಬ್ಬ ಗಂಡನೇ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೇ ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ’ ಎಂದು ತನ್ನ ಅಂತರಂಗ ಬಹಿರಂಗದ ಪತಿಯನ್ನು ಕುರಿತು ತಿಳಿಸುತ್ತಾಳೆ. ಅಕ್ಕಮಹಾದೇವಿ ವೈರಾಗ್ಯತಾಳಿ ಕಲ್ಯಾಣಕ್ಕೆ ಆಗಮಿಸುತ್ತಾಳೆ. ಬಸವಣ್ಣ, ಅಲ್ಲಮ, ಸಿದ್ದರಾಮ ಮಡಿವಾಳ ಮಾಚದೇವ ಮುಂತಾದ ಶಿವಭಕ್ತಿಯೋಂದಿಗೆ ತನ್ನ ಹಲವಾರು ಆಧ್ಯಾತ್ಮಿಕ ಗುರು, ಲಿಂಗ ಜಂಗಮ, ರುದ್ರಾಕ್ಷಿ ಪದೊದಕ

ಮುಂತಾದವುಗಳ ಕುರಿತು ಚರ್ಚಿಸಿ ಅನೇಕ ವಚನಗಳನ್ನು ಬರೆಯುತ್ತಾಳೆ. ಅನುಭವ ಮಂಟಪದ ಅಕ್ಕಳಾಗಿ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರಳಾಗುತ್ತಾಳೆ. ಶಿವಶರಣರ ಕುರಿತು ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ,

**ಅಯ್ಯಾ ನಿಮ್ಮ ಶರಣರ ಬರವಿಂಗೆ ಗುಡಿ**
**ತೋರನವ ಕಟ್ಟುವೆ ಅಯ್ಯಾ ನಿಮ್ಮ**
**ಶರಣರ ಬರವಿಂಗೆ ಮುಡುಹಿನಲ್ಲಿ ಪಟ್ಟುವ**
**ಕಟ್ಟುವೆ. ಅಯ್ಯಾ ನಿಮ್ಮ ಶರಣರೆನ್ನ**
**ಮನೆಗೆ ಬಂದೆಡೆ.**
**ಅವರ ಶ್ರಿ ಪಾದವನೆನ್ನ ಹೃದಯದಲ್ಲಿ**
**ಬಗೆದಿಟ್ಟುಕೊಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ**

ಅನುಭವ ಮಂಟಪದ ಶಿವಶರಣರ ಕಾಯಾ, ವಾಚಾ, ಮನಸ್ಸಾಪೂರ್ವಕವಾಗಿ ಶರಣರು ನಿತ್ಯಮಾಡುವ ಕಾಯಕ ದಾಸೊಹಕ್ಕೆ ಮಾರುಹೊಗಿ ಬಸವಣ್ಣ ಅಲ್ಲಮಪ್ರಭುದೇವರ 'ಕಾಯಕವೇ ಕೈಲಾಸ' ತತ್ವಗಳಿಗೆ ಶರಣುಸಮರ್ಪಿಸಿದಳು,

**'ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ**
**ಅಯ್ಯಾ ನಿಮ್ಮ ಶರಣರಿದ್ದ ಪುರವೇ ಕೈಲಾಸ ಪುರವಯ್ಯಾ ಅಯ್ಯಾ ನಿಮ್ಮ ಶರಣರು**
**ನಿಂದುದೆ ನಿಜನಿವಾಸವಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ**
**ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ ಆನು ಸಂಗನಬದವಣ್ಣನ**
**ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೇನು.'**

ಅಕ್ಕಮಹಾದೇವಿಯು ವೀರವಿರಾಗಿಣಿಯಾಗಿ ಗುರು, ಲಿಂಗ ಜಂಗಮ, ಪ್ರಸಾದ, ಕಾಯಕ ದಾಸೋಹ, ಮುಂತಾದವುಗಳನ್ನು ತನ್ನ ವಚನಗಳಲ್ಲಿ ವಿವರಿಸಿದ್ದಾಳೆ.

**'ಅಂಗೈಯೊಳಗಣ ಲಿಂಗವ ಪೂಜಿಸುತ್ತ ಮಂಗಳಾರತಿಗಳನ್ನು ತೊಳಗಿ**
**ಬೆಳಗುತ್ತಲಿರ್ದೆ**
**ನೋಡಯ್ಯಾ ಕಂಗಳ ನೋಟ ಕರುವಿಟ್ಟ ಭಾವ ಹಿಂಗದ ಮೋಹ**
**ತೆರಹಿಲ್ಲದಿರ್ದೆ ನೋಡಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ನಗಲದ**
**ಪೂಜೆ ಅನುವಾಯಿತ್ತೆನಗ'**

ಅಕ್ಕಮಹಾದೇವಿಯ ವಚನಗಳಲ್ಲಿ ಧಾರ್ಮಿಕ, ಸಾಮಾಜಿಕ ಅಂಶಗಳಿಗಿಂತ ಮಾನವೀಯ ಅನುಕಂಪ, ಮಾನವೀಯತೆ, ಪ್ರೀತಿ, ತ್ಯಾಗ ಮುಂತಾದವುಗಳನ್ನು ಕಾಣಬಹುದಾಗಿದೆ.. ಸಮಾಜದಲ್ಲಿ ಮನುಷ್ಯನು ಹೇಗೆ ಬದುಕಬೇಕು, ಅನ್ಯರಿಗೆ ಉಪಕಾರ ಅನುಕಂಪಗಳನ್ನು ತೊರಿಸಿ ಸನ್ಮಾರ್ಗದೆಡೆಗೆ ಸಾಗಲು ಪ್ರೇರಣೆಯಾದಳು.

ಪ್ರಾಚೀನ ಕಾಲದಿಂದ ಹಿಡಿದು ಇಂದಿನವರಿಗೂ ಶಿಕ್ಷಕರಿಗೆ ಗೌರವ, ಸನ್ಮಾನ ನಿರಂತರತೆಯಿಂದನಡೆದಿದೆ. ಇಂತಹ ಗುರುವಿನ ಮಹಿಮೆಯನ್ನು ಅಕ್ಕಮಹಾದೇವಿ ತನ್ನ ವಚನಗಳಲ್ಲಿ ತಳಿಸುವ ಪರಿ.

**ಗುರುವಿನ ಕರಣದಿಂದ ಲಿಂಗ ಜಮುಗಮನ ಕಂಡೆ**
**ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ**
**ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ.**

**ಚೆನ್ನಮಲ್ಲಿಕಾರ್ಜುನಯ್ಯಾ ನಾ ಹುಟ್ಟಿದೊಡನೆ**
**ವಿಭೂತಿಯ ಪಟ್ಟವ ಕಟ್ಟಿ ಸದ್ಗುರುಸ್ವಾಮಿ ಲಿಂಗ ಸ್ವಾಯತವ**
**ಮಾಡಿದನಾಗಿ ಧನ್ಯಳಾದೆನು. ಎಂದು ಗುರುವಿನ ಮಹಿಮೆ ತಿಳಿಸುತ್ತಾ.**

**'ಗುರುವಿನಿಂದ ಲಿಂಗವ ಕಂಡೆ, ಜಂಗಮವ ಕಂಡೆ,**
**ಗುರುವಿನಿಂದ ಪಾದೋದಕವ ಕಂಡೆ, ಪ್ರಸಾದವ ಕಂಡೆ ಗುರುವಿನಿಂದ ನನ್ನ ನಾ ಕಂಡೆ**
**ಚೆನ್ನಮಲ್ಲಿಕಾರ್ಜುನ'**

ಅಕ್ಕಮಹಾದೇವಿಯು ತನ್ನ ಎಲ್ಲಾ ಭವ, ಬಂಧನಗಳನ್ನು ತ್ಯಜಿಸಿ ಕಲ್ಯಾಣ ನಗರಕ್ಕೆ ಹೊರಟಳು. ಇದನ್ನು ಅರಿತ ಅಣ್ಣ ಬಸವಣ್ಣನು ಕಿನ್ನರಯ್ಯನಿಂದ ಆಕೆಯನ್ನು ಶಿವಾನುಭವ ಮಂಟಪಕ್ಕೆ ಬರಮಾಡಿಕೋಡನು. ಆಗ ಅಲ್ಲಿದ್ದ ಶಿವಶರಣಂಗಳ ಮಧ್ಯದಲ್ಲಿ ಅಲ್ಲಮ ಪ್ರಭುವು ಆಕೆಗೆ ಮೊದಲಿಸಿ ನುಡಿದುದು "ಯೌವ್ವನವನೊಳಕೊಂಡು ಸತಿ, ನೀನು ಇತ್ತಲೇತಕ್ಕೆ ಬಂದೆಯವ್ವ? ಸತಿ ಎಂದರೆ ಮುನಿವರು ಎಮ್ಮ ಶರಣರು, ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿದು, ಅಲ್ಲದಿರೆ ತೊಲಗು ತಾಯೇ" ಎಂದು ನಿಡಿದನು. ಅದಕ್ಕೆ ಅಕ್ಕಮಹಾದೇವಿಯ

ಹರನೆ ನೀನನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ! ಹಸೆಯ ಮೇಲನ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರ ಕಳುಹಿದರೆಮ್ಮವರು. ಭಸ್ಮವನೆ ಹೂಸಿ ಕಂಕಣವನೆ ಕಟ್ಟಿ ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದಳು. ಪಚ್ಚೆಯ ನೆಲಗಟ್ಟು ಕನಕದ ತೋರಣ, ವಜ್ರದ ಕಂಬ ಕವಳದ ಚಪ್ಪರವನಿಕ್ಕಿ ಮದುವೆಯ ಮಾಡಿದರೆಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು. ಎಂದು ಶಿವಶರಣರ ಎದುರು ನುಡಿಯುತ್ತಾಳೆ.

ಸಂಸಾರ ಸಾಗರದೊಳಗೆ ಬಿದ್ದೆನೋಡಾ ನಾನು

ಸಂಸಾರ ನಿಸ್ಸಾರವೆಂದು ತೋರಿದನೆನಗೆ ಗುರು

ಅಂಗವಿಕಾರದ ಸಂಗವ ನಿಲಿಸಿ

ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು

ಹಿಂದನ ಜನ್ಮವ ತೊಡೆದು

ಮುಂದಣ ಪಥವ ತೋರಿದನೆನ್ನ ತಂದೆ

ಚನ್ನಮಲ್ಲಿಕಾರ್ಜುನನ ನಿಜವನರುಹಿದನೆನ್ನ ಗುರು

ಗುರು,ಲಿಂಗ,ಜಂಗಮ, ಪಾದೋದಕ, ಪ್ರಸಾದ ಹಾಗೂ ಕಾಯಕದ ಬಗ್ಗೆ ಮಹತ್ವ ತಿಳಿಸಿದ ನಿಜ ಶರಣೆ

ಗುರುವಿನ ಕರುಣದಿಂದ ಲಿಂಗ ಜಂಗಮನ ಕಂಡೆ

ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ

ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ

ವಿಭೂತಿಯ ಪಟ್ಟವ ಕಟ್ಟಿ ಸದ್ಗುರುಸ್ವಾಮಿ

ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು

ಅಕ್ಕಮಹಾದೇವಿ ಕವಯಿತ್ರಿ ವಚನಕಾರ್ತಿ ಮಾತ್ರವಲ್ಲ ಅವಳು ಆಧ್ಯಾತ್ಮಿಕ ಹುಡುಕಾಟದಲ್ಲಿಯೂ ನಮಗೆ ಗೋಚರಿಸುತ್ತಾಳೆ. ಅಕ್ಕನ ಕುರಿತು ಬಹುಭಾಷೆಗಳಲ್ಲಿ ಅಧ್ಯಯನಗಳು ನಡೆದು ಆಯಾ ಭಾಷೆಗಳಲ್ಲಿ ಭಾಷಾಂತರವಾಗಿವೆ. ಹರಿಹರನ ಮಹಾದೇವಿಯಕ್ಕನ ರಗಳೆ ಚಾಮಾರಸನ ಪ್ರಭುಲಿಂಗಲೀಲೆ ಹಲವಾರು ಪಂಡಿತದಿಂದ ಕೃತಿಗಳು ಲೋಕಾರ್ಪಣೆಯಾಗಿರುವುದನ್ನು ಕಾಣಬಹುದು. ಕಲ್ಯಾಣದ ಅನುಭವ ಮಂಟಪದಲ್ಲಿ ಅನೇಕ ಶಿವಶರಣ–ಶರಣಿಯರು, ಇದ್ದರು ಕಿರಿಯ ವಯಸ್ಸಿನ ಅನುಭವದ ಕವಿಯಾಗಿ ಹೊರಹೊಮ್ಮಿ ಕನ್ನಡ ಸಾಹಿತ್ಯಕ್ಕೆ 'ಯೋಗಾಂಗ ತ್ರಿವಿಧಿ' ಎಂಬ ಕೃತಿಯನ್ನು ನಿಡಿ ಅಜರಾಮರವಾಗಿದ್ದಾರೆ. ಇಂತಹ ಮಹಾದೇವಿ ಅಕ್ಕನ ಧೈರ್ಯ, ಸ್ಥೈರ್ಯ ಯುವ ಪೀಳಿಗೆಗಳಗೆ, ಮಹಿಳೆಯರಿಗೆ ಮಾದರಿ.

ಆಕರ ಗ್ರಂಥ


- ಶರಣ ಚರಿತಾಮೃತ: ಡಾ.ಸಿದ್ಧಯ್ಯ ಪುರಾಣಿಕ